ಬಸವಕಲ್ಯಾಣ ಪಟ್ಟಣಕ್ಕೆ ರಸ್ತೆಗಳ ಡಾಂಬರೀಕರಣ.

3227 - ಶ್ರೀ ಬಸವರಾಜ ಪಾಟೀಲ ಅಟ್ಟೂರ್, (ಬಸವಕಲ್ಯಾಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣದಲ್ಲಿ ಯಾತ್ರಾಸ್ಥಳಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಸಂಖ್ಯೆ ಎಷ್ಟು? ಮತ್ತು ಅವುಗಳ ಹೆಸರುಗಳೇನು?

ಆ) ಸದರಿ ರಸ್ತೆಗಳು ಬಹಳ ದುಸ್ಥಿತಿಯಲ್ಲಿದ್ದು ಜನರು ಓಡಾಡಲು ತುಂಬಾ ತೊಂದರೆ ಹಾಗೂ ವಾಹನಗಳಿಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಕ್ಕನಾಗಮ್ಮನ ಗವಿ ಆರವಿನ ಮನೆ ಮೇಳದ ಮಾರಯ್ಯನ ಹೊಂಡ ಅನುಭವ ಮಂಟಪ, ಮಾಚಿದೇವರ ಹೊಂಡದ ರಸ್ತೆಗಳಿಗೆ ತಕ್ಷಣ ಹಣ ಬಿಡುಗಡೆ ಮಾಡಿ ರಸ್ತೆ ಡಾಂಬರೀಕರಣ ಮಾಡುವ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಕೆ.ಜೆ ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಬಸವ ಕಲ್ಯಾಣ ಯಾತಾಸ್ಥಳಗಳ ವ್ಯಾಪ್ತಿಯಲ್ಲಿ ಒಟ್ಟು 12 ರಸ್ತೆಗಳು ಇರುತ್ತದೆ.

1. ಕೋಟಿ ರಸ್ತೆ
2. ಗಡಗಿ ಮಠ (ಪ್ರಭುದೇವರ) ರಸ್ತೆ
3. ಆರವಿನ ಮನೆ ರಸ್ತೆ
4. ಅಕ್ಕನಾಗಮ್ಮನಗವಿ ರಸ್ತೆ
5. ಮಡಿವಾಳ ಮಾಜಿ ದೇವರ ಹೊಂಡದ ರಸ್ತೆ
6. ಅನುಭವ ಮಂಟಪ ರಸ್ತೆ
7. ಸೂಲಿ ಚಂದಯ್ಯ ರಸ್ತೆ
8. ವಿಷ್ರಾಂತ ಶೇಕರ ರಸ್ತೆ
9. ರಾಜಾ ಬಗಸ್ವಾರ ದರ್ಗಾ ರಸ್ತೆ
10. ಮೌಲಾನಾ ಯಾಕೂಬ ದರ್ಗಾ ರಸ್ತೆ
11. ಶ್ರೀ ಬಸವೇಷ್ವರ ಮಂದಿರ್ತೆ
12. ಪಾರಸಕಟಾಸ್ತೆ.

ಆ) ಹೌದು.

ಇ) ಕಳೆದ ವರ್ಷ 1990-91 ನೇ ಸಾಲಿನಲ್ಲಿ ರೂ. 2.69 ಲಕ್ಷ ಬಿಡುಗಡೆ ಮಾಡಿದೆ ಮತ್ತು ರೂ. 4.45 ಲಕ್ಷಗಳನ್ನು 91-92ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಆಳಂದ ತಾಲ್ಲೂಕಿನ ಸಲಗರ ಗ್ರಾಮಕ್ಕೆ ಪೋಲೀಸ್ ಠಾಣೆ ಸ್ಥಾಪನೆ.

3222 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನ ಸಲಗರ ಗ್ರಾಮದಲ್ಲಿ ಇಲ್ಲಿಯವರೆಗೆ ನಡೆದಿರುವ ಕಳ್ಳತನ, ಗಲಾಟೆಗಳ ಸಂಖ್ಯೆಗಳೆಷ್ಟು?